**<u>ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>ಎಸ್.ಸಿ. 112/2020</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರವೀಣ್ |
| ತಂದೆಯ ಹೆಸರು | : | ಪರಮೇಶ್ವರಪ್ಪ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಮದನಬಾವಿ, ನ್ಯಾಮತಿ, ದಾವಣಗೆರೆ. |

ಪಿ.ಡಬ್ಲ್ಯೂ. 1
ಸಿ.ಡಬ್ಲ್ಯೂ. 1

ದಿ.26.05.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)</u>**:

1. ನನ್ನ ತಂದೆ ಪರಮೇಶ್ವರಪ್ಪ ರವರು ಮೃತಪಟ್ಟಿರುತ್ತಾರೆ. ಚಾಸಾ.10 ನನ್ನ ಚಿಕ್ಕಮ್ಮ. ಚಾಸಾ.11 ರವರು ನನ್ನ ತಾಯಿ. ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನಾನು ನೋಡಿದ್ದೇನೆ. ನಮ್ಮ ಬೀದಿಯಲ್ಲಿ ಆರೋಪಿತರು ಅವರ ಸಂಬಂಧಿಕರ ಮನೆಗೆ ಬಂದು ಹೊಗುತ್ತಿದ್ದರು ಅದ್ದರಿಂದ ಅವರ ಮುಖ ಪರಿಚಯ ಇರುತ್ತದೆ. ನನ್ನ ತಂದೆ ಪರಮೇಶ್ವರಪ್ಪ ರವರು ಆತ್ಮಹತ್ಯೆ ಮಾಡಿಕೊಂಡು ತೀರಿಕೊಂಡಿದ್ದಾರೆ. ನನ್ನ ತಂದೆ ಪ್ಲಾಸ್ಟಿಕ್ ನೂಲಿನ ಹಗ್ಗದಿದ್ದ ನೇಣು ಹಾಕಿಕೊಂಡು ತೀರಿಕೊಂಡಿದ್ದಾರೆ.

2. ನಾನು 2017 ನೇ ಇಸವಿಯಲ್ಲಿ ತುಮಕೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದೆ. ಆಗ ನನ್ನ ತಂದೆ ತಾಯಿಯವರು ಊರಿನಲ್ಲಿದ್ದರು ಅಂದರೆ ನ್ಯಾಮತಿಯ ಮಾದನಬಾವಿ ಗ್ರಾಮದಲ್ಲಿ ವಾಸವಾಗಿದ್ದರು. ತುಮಕೂರಿನಿಂದ ನಾನು ಆಗಾಗ ನಮ್ಮ ಊರಿಗೆ ಬಂದು ನಮ್ಮ ತಂದೆ ತಾಯಿಯನ್ನು ನೋಡಿಕೊಂಡು ಹೋಗುತ್ತಿದ್ದೆ. ಅದಂತೆಯೇ ನಾನು ದಿನಾಂಕ 02.01.2017 ರಂದು ನನ್ನ ತಂದೆ ತಾಯಿಗೆ ನೋಡಲು ಊರಿಗೆ ಬಂದಿದ್ದೆ. ದಿನಾಂಕ 03.01.2017 ರಂದು ರಾತ್ರಿ 10.00 ಗಂಟೆಗೆ ಎಲ್ಲಾ ಆರೋಪಿತರು ಗುಂಪು ಕಟ್ಟಿಕೊಂಡು ನಮ್ಮ ಮನೆಯ ಹತ್ತಿರ ಬಂದು ಮನೆಯ ಹೊರಗಡೆ ಬಂದು ನಮ್ಮ ತಂದೆಯವರನ್ನು ಕೂಗಿ "ನಿಮ್ಮ ಮಗ ನಮ್ಮ ಅಣ್ಣನ ಮಗಳಾದ ಲತಾ ರವರನ್ನು ಪ್ರೀತಿಸುತ್ತಿದ್ದಾರೆ" ಅಂತ ಹೇಳಿ ನನ್ನ ತಂದೆಗೆ 1 ನೇ ಆರೋಪಿ ರವರು ಕಪಾಳಕ್ಕೆ ಹೊಡೆದು, ಹಲ್ಲೆ ಮಾಡಿ ಅಂದರೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಆ ಗಲಾಟೆ ಶಬ್ದವನ್ನು ಕೇಳಿ ಅಕ್ಕ-ಪಕ್ಕದವರಾದ ನನ್ನ ಚಿಕ್ಕಪ್ಪ ಕರಿಬಸಪ್ಪ, ರವಿ, ಪ್ರಕಾಶ್ ಹಾಗೂ ಇತರರು ಬಂದರು. ಮನೆಯಲ್ಲಿ ನಾನು ಮತ್ತು ನನ್ನ ತಾಯಿ ಇದ್ದೇವು. ಈ ವಿಷಯದ ಬಗ್ಗ ಪಂಚಾಯಿತಿ ಮಾಡಲಾಗಿ ಲತಾ ಎಂಬುವವರೊಂದಿಗೆ ನನ್ನ ಮದುವೆ ಆಗುವುದನ್ನು ಮನಪೂರ್ವಕವಾಗಿ ಒಪ್ಪಿಕೊಂಡಿದ್ದರು. ಆದಾದ ನಂತರ ಆರೋಪಿತರು ತಮ್ಮ ಮನೆಗೆ ಹೋಗಿದ್ದರು. ಮಾರನೇ ದಿನ 1 ನೇಆರೋಪಿಯು ನಮ್ಮ ಮನೆಗೆ ಬಂದು, ಲತಾ ಎಂಬುವವರೊಂದಿಗೆ ಮದುವೆ ಆಗುವುದು ಬೇಡ ರೂ.2,00,000/- ನೀಡಬೇಕೆಂದು ಒತ್ತಾಯ ಮಾಡಿದ್ದರು. ಅದಕ್ಕೆ ನಾನು ಒಪ್ಪಿರಲಿಲ್ಲ ಮತ್ತು ಲತಾಗೆ ಮದುವೆಯಾಗುತ್ತೇನೆ ಎಂದು ಹೇಳಿದ್ದೆ. ಅದ್ದರಿಂದ 1 ನೇ ಆರೋಪಿ ಅದನ್ನ ಕೇಳಿ ಅಲ್ಲಿಂದ ಹೊರಟರು.

3. ದಿನಾಂಕ 04.01.2017 ರಂದು ಸಂಜೆ 07.00 ಗಂಟೆಗೆ ಮನೆಯ ಹತ್ತಿರ ಎಲ್ಲಾ ಆರೋಪಿತರು ಬಂದು ಪುನಃ ನಮ್ಮ ತಂದೆಗೆ ಹಲ್ಲೆ ಮಾಡಲು ಮುಂದಾಗಿ "ನಿಮ್ಮನ್ನ ಮತ್ತು ಕುಟುಂಬದವರನ್ನು ಜೈಲಿಗೆ ಕಳುಹಿಸುತ್ತೇನೆ, ಪೋಲೀಸ್ ಕಂಪ್ಲೇಟ್

ಕೊಡುತ್ತೇವೆ” ಎಂದು ಹೇಳಿದರು. ಈ ಒಂದು ಕುಮ್ಮಕ್ಕಿನಿಂದ ನಮ್ಮ ತಂದೆಯವರು ಮರಿಯಾದೆಗೆ ಅಂಜಿ ಕುಟುಂಬವನ್ನು ರಕ್ಷಣೆ ಮಾಡಬೇಕು ಎಂದು ಹೇಳಿ ಮನೆಯ ಹಿಂಬದಿಗೆ ಹೋಗಿ ಹಚ್ಚಿನ ಮನೆಯ ಟಿರಿಗೆಗೆ ಹಗ್ಗದಿಂದ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರು. ನಮ್ಮ ತಂದೆಯನ್ನು ನಾವು ಆ ಸಮಯದಲ್ಲಿ ಕಾಣದೆ ಇರುವುದರಿಂದ, ಎಲ್ಲಾ ಕಡೆ ಹುಡುಕಾಡಿದೆವು. ನನ್ನ ಚಿಕ್ಕಮ್ಮ ರವರು ಸುಮಾರು 09.00 ಗಂಟೆಯ ಸಮಯದಲ್ಲಿ ಮನೆಯ ಹಿಂಭಾಗ ಹೋಗಿ ನೋಡಿದಾಗ ಅವರು ನಮ್ಮ ತಂದೆ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಬಂದು ತಿಳಿಸಿದರು. ಕೂಡಲೇ ನಾವು ನಮ್ಮ ತಂದೆಯನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ವೈದ್ಯರು ನಮ್ಮ ತಂದೆಯವರು ತೀರಿಕೊಂಡಿದ್ದಾರೆ ಎಂದು ತಿಳಿಸಿದರು. ತದನಂತರ ನಾವು ನ್ಯಾಮತಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟೆ. ದೂರನ್ನು ನಮ್ಮ ತಂದೆಯ ಸಾವಿಗೆ ಪ್ರೇರಣೆಗೆ ಕಾರಣಕರಾದ ಆರೋಪಿತರ ವಿರುದ್ಧ ದೂರನ್ನು ಕೊಟ್ಟಿದ್ದೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು, ದೂರನ್ನು **ನಿಪಿ.1** ಎಂದು ಸಾಕ್ಷಿಯ ಸಹಿ ***ನಿಪಿ.1(ಎ)*** ಎಂದು ಗುರುತಿಸುತ್ತೇನೆ. ಆ ದಿನ ನಮ್ಮ ತಂದೆ ಆತ್ಮಹತ್ಯೆ ಮಾಡಿಕೊಳ್ಳಲು ನ್ಯಾಯಾಲಯದ ಮುಂದೆ ಇರುವ ಆರೋಪಿತರು ಕಾರಣರಾಗಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಕೆ.ಆರ್.ಎಂ., ವಕೀಲರಿಂದ ಆರೋಪಿತರ ಪರವಾಗಿ**:

4. ಆ ದಿನ ಆರೋಪಿತರು ಗುಂಪು ಕಟ್ಟಿಕೊಂಡು ಬಂದಿದ್ದರು. ಆಗ ರಾತ್ರಿಯಾಗಿತ್ತು. ಆ ಗುಂಪಿನಲ್ಲಿ ಯಾರು ಯಾರು ಬಂದಿದ್ದರು ಅಂತ ದೂರಿನಲ್ಲಿ ಹೇಳಿಲ್ಲ. ಆರೋಪಿತರ ಪೈಕಿ 1 ರಿಂದ 4 ನೇ ಆರೋಪಿತರು ಶಿಕಾರಿಪುರ ನಳ್ಳಿನಕೊಪ್ಪ ಊರಿನವರು. ಅವರ ಹೆಸರು ಬಸವರಾಜಪ್ಪ, ಶ್ರೀಧರ್, ರಾಜು ಮತ್ತು ಮಹೇಶ್ವರಪ್ಪ. ಉಳಿದವರು ನಮ್ಮ ಗ್ರಾಮದಲ್ಲಿ ವಾಸವಾಗಿದ್ದಾರೆ. ಅವರು 5 ನೇ ಆರೋಪಿ ಅಣ್ಣಪ್ಪ ಇರುತ್ತಾರೆ. 1 ನೇ ಆರೋಪಿ ನಮ್ಮ ತಂದೆಗೆ ಕಪಾಳಕ್ಕೆ ಹೊಡೆದಾಗ ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ತಾಯಿ ಇದ್ದೆವು. ಅವರು ನಮ್ಮ ತಂದೆಗೆ ಮನೆಯ ಮುಂಭಾಗ ಅಂದರೆ ಮನೆಯ

ಹೊಸಿಲಿಗಿಂತ ಮುಂಚೆ ಇರುವ ಜಾಗದಲ್ಲಿ ನಮ್ಮ ತಂದೆಯ ಕಪಾಳಕ್ಕೆ ಹೊಡೆದರು. ಆ ಸಮಯದಲ್ಲಿ ಅಕ್ಕ-ಪಕ್ಕದವರು ಅಲ್ಲಿ ಇದ್ದರು. ಆ ಸಮಯದಲ್ಲಿ ಚಾಸಾ.10, ನನ್ನ ತಾಯಿ ಚಾಸಾ.11 ಅಲ್ಲಿ ಇದ್ದರು. ನನ್ನ ತಂದೆಗೆ ಕಪಾಳಕ್ಕೆ ಹೊಡೆದಾಗ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಪ್ರಯತ್ನಿಸಿಲ್ಲ. ಯಾರ್ಯಾರು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಎಲ್ಲಾ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದರು. ಪೋಲೀಸರಿಗೆ ನಾನು ಲತಾ ಎಂಬುವವರನ್ನು ಪ್ರೀತಿಸುತ್ತಿದ್ದ ಬಗ್ಗೆ ಪ್ರೇಮಪತ್ರ ಇತ್ಯಾದಿಯನ್ನು ಕೊಟ್ಟಿಲ್ಲ.

5. ದಿನಾಂಕ 04.01.2017 ರಂದು 1 ನೇ ಆರೋಪಿ ಬಂದಾಗ ಬೆಳಿಗ್ಗೆ 09.00 ಗಂಟೆಯಾಗಿತ್ತು. ಆ ಸಮಯದಲ್ಲಿ ಜನರು ಎಂದಿನಂತೆ ಓಡಾಡುತ್ತಿದ್ದರು. ಅಲ್ಲಿ ಊರಿನವರು ಸೇರಿದ್ದರು ಅದರಲ್ಲಿ ಚಾಸಾ.10, ಕರಿಬಸಪ್ಪ, ರವಿ, ಪ್ರಕಾಶ್ ರವರು ಇದ್ದರು. ಎಷ್ಟು ಜನ ಆಗ ಸೇರಿಕೊಂಡಿದ್ದರು ಅಂತ ಹೇಳಲು ಬರುವುದಿಲ್ಲ. ನನ್ನ ದೂರಿನಲ್ಲಿ ಎಷ್ಟು ಜನ ಸೇರಿದ್ದರು ಅಂತ ನಾನು ಹೇಳಿಲ್ಲ. 7 ರಿಂದ 8 ಜನ ಸೇರಿದ್ದರು. ಅವರ ಹೆಸರು ಚಾಸಾ.10(ದೊಡ್ಡಮ್ಮ), ಚಾಸಾ.11(ತಾಯಿ). ಮೇಲೆ ಹೇಳಿದಂತಹ ವ್ಯಕ್ತಿಗಳನ್ನು ಬಿಟ್ಟು ಬೇರೆ ಇನ್ಯಾರು ಸೇರಿದ್ದರು ಅಂತ ಅವರ ಹೆಸರು ದೂರಿನಲ್ಲಿ ಕಾಣಿಸಿಲ್ಲ.

6. ಆರೋಪಿತರು ನನ್ನ ತಂದೆಯ ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಕಾರಣಗಾರರು ಅಲ್ಲ ಎಂದರೆ ಸುಳ್ಳು. ನಾನು ಮುಖ್ಯವಿಚಾರಣೆಯಲ್ಲಿ ಹೇಳಿದಂತಹ ಪಂಚಾಯಿ ಆದಾಗ ಪಂಚಾಯಿತಿಗೆ 8 ರಿಂದ 10 ಜನ ಸೇರಿದ್ದರು. ಆ ಸಮಯದಲ್ಲಿ ಪಂಚಾಯಿತಿ ಪತ್ರ ಆಗಿಲ್ಲ. ಪಂಚಾಯಿತಿಯಲ್ಲಿ ಭಾಗವಹಿಸಿದವರ ಹೆಸರುಗಳು ಎಂದರೆ ರಾಜಪ್ಪ, ಕರಿಬಸಪ್ಪ, ರವಿ, ಪ್ರಕಾಶ್, ಬರಮಪ್ಪ ಮತ್ತು ಆರೋಪಿತರು ಬಂದಿದ್ದರು. ನನ್ನ ತಂದೆ ತಾಯಿ ಮತ್ತು ನಾನು ಸಹ ಆ ಪಂಚಾಯಿತಿಯಲ್ಲಿ ಇದ್ದೇವು. ದೂರಿನಲ್ಲಿ ನಾನು 8-10 ಜನರು ಸೇರಿ ಪಂಚಾಯಿತಿ ನಡೆದಿತ್ತು ಅಂತ ಬರೆಸಿದ್ದೇನೆ. ಸಾಕ್ಷಿದಾರರು ಪುನಃ ಹೇಳುತ್ತಾರೆ ಆ ವಿಷಯದ ಬಗ್ಗೆ ಗ್ರಾಮಸ್ಥರು ಅಂತ ಬರೆಸಿದ್ದೇನೆ.

7. ಎರಡು ಲಕ್ಷ ರೂಪಾಯಿಯನ್ನು ಆರೋಪಿತರು ಬೇಡಿಕೆ ಇಟ್ಟಿದ್ದನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮತ್ತು ಆರೋಪಿತರು ಒಂದೇ ಜನಾಂಗದವರು. ನಮ್ಮ ತಂದೆಯವರು ನಮ್ಮ ಕೌಂಟುಂಬಿಕ ಕಲಹದಿಂದ ತೀರಿಕೊಂಡಿದ್ದಾರೆ ಎಂದರೆ ಸುಳ್ಳು. ನಾನು ಲತಾ ಎಂಬುವವರನ್ನು ಪ್ರೀತಿಸಿದ್ದ ಬಗ್ಗೆ ಮತ್ತು ನನ್ನ ತಂದೆಯವರು ಆತ್ಮಹತ್ಯೆ ಮಾಡಿಕೊಂಡಿದ್ದರ ಬಗ್ಗೆ ಏನೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಲತಾ ನನ್ನೊಂದಿಗೆ ಮದುವೆಯಾಗುವುದಿಲ್ಲ ಅಂತಾ ಹೇಳಿದ್ದಕ್ಕೆ ಆರೋಪಿತರ ವಿರುದ್ಧ ನಾನು ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಮತ್ತು ನಮ್ಮ ತಂದೆಯ ಆತ್ಮಹತ್ಯೆಗೆ ಏನೂ ಸಂಬಂಧ ಇಲ್ಲಎಂದರೆ ಸುಳ್ಳು.

8. ಆರೋಪಿತರು ನಮ್ಮ ಊರಿನಿಂದ ಸುಮಾರು 100 ಕಿ.ಮೀ ದೂರ ಇದ್ದಾರೆ ಎಂದರೆ ಸುಳ್ಳು. ಆರೋಪಿತರು ಬೇರೆ ತಾಲ್ಲೂಕಿನವರು. ಸಾಕ್ಷಿದಾರರು ಹೇಳುತ್ತಾರೆ ಅವರು 15 ರಿಂದ 20 ಕಿ.ಮೀ ದೂರದಲ್ಲಿರುವ ಗ್ರಾಮದವರು. ನನ್ನ ಊರು ಹೊನ್ನಾಳಿ ತಾಲ್ಲೂಕು ಇರುತ್ತದೆ. ಆರೋಪಿತರು ನಮ್ಮ ಊರಿಗೆ ದಿನಾಂಕ 02.01.2017, 03.01.2017 ಮತ್ತು 04.01.2017 ರಂದು ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಒಬ್ಬರಿಗೊಬ್ಬರಿಗೆ ಸಂಬಂಧಿಕರು ಎಂದರೆ ನಿಜ. ಲತಾ ಎಂಬುವವರು ಸದಾಶಿವ ಎಂಬುವವರ ಮಗಳು. ಲತಾ ಅವರು 1 ನೇ ಆರೋಪಿಯ ಅಣ್ಣನ ಮಗಳು ಮತ್ತು 5 ನೇ ಆರೋಪಿಗೆ ವಾರಿಗೆತಂಗಿ. ಪ್ರೇಮ ವಿಚಾರವನ್ನು ಮುಂದೆ ಇಟ್ಟು ನಾನು ಸುಳ್ಳು ದೂರನ್ನು ಆರೋಪಿತರ ವಿರುದ್ಧ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.